# ಕಾನನ

**NOVEMBER 2012**


## ನಿಸರ್ಗದೆಡೆಗೆ ಪಯಣ



Photography by: Raviprakash

WILDLIFE
CONSERVATION
GROUP

© W C G



# ಕಾನನ

NOVEMBER 2012

ನಿಸರ್ಗದೆಡೆಗೆ ಪಯಣ

## ಲೇಖನಗಳು


* ಕಪ್ಪೆ ಕಮ್ಮಟ – ಅಶೋಕವರ್ಧನ
* ಹಕ್ಕಿಲೋಕ – ಅಶ್ವಥ.ಕೆ.ಎನ್
* ವಿದ್ಯಾರ್ಥಿಗಾಗಿ ವಿಜ್ಞಾನ – ಮುರಳಿ.ಎಸ್
* ಐಸೋಟೋಪು – ಶಂಕರಪ್ಪ.ಕೆ.ಪಿ


ಅನಿಸಿಕೆ


E-mail: kaanana.mag@gmail.com


ಮುಖಪುಟ: Blue eyed Bush frog


© W C G



# ಸಂಪಾದಕೀಯ

ಜುಳು ಜುಳು ಹರಿಯುವ ನೀರಿನ ತೊರೆ, ತಂಪಾದ ಮರಗಳ ನೆರಳು ,ಇಂಪಾದ ಹಕ್ಕಿಗಳ ಕಲರವ , ಕಿತ್ತು ತಿನ್ನುವ ನೀರವತೆ , ಬಣ್ಣ ಬಣ್ಣ ದ ನೂರಾರು ಚಿಟ್ಟೆಗಳು, ಕೀಟಗಳು ಎಲ್ಲವೂ ಅದ್ಭುತ ವಿಸ್ಮಯ. ಎಲ್ಲಿಂದಲೋ ಹಕ್ಕಿಗಳಂತೆ, ಗಿರಗಿಟ್ಲೆಯಂತೆ ಗಾಳಿಯಲ್ಲಿ ತೇಲಿ ಬರುವ ಬೀಜಗಳಿಗೆ ಭೂಮಿಯ ಆಸರೆ ದೊರೆತು ಅದು ನೂರ್ಮಡಿಯಾಗಿ ಬೆಳೆಯುತ್ತದೆ. ಮರವಾಗುತ್ತದೆ ಕಾಡಾಗುತ್ತದೆ ಅಂತಹ ಶಕ್ತಿ ಈ ಮಣ್ಣಿಗಿದೆ. ಲಾವದಂತಹ ಎರಕವನ್ನು ತನ್ನ ಒಡಲಾಳದಲ್ಲಿ ಇಟ್ಟುಕೊಂಡಿರುವ ಭೂಮಿಯ ನಿಜ ಸ್ವರೂಪವನ್ನು ಬಲ್ಲವರಾರು.

ಮರಗಿಡಗಳನ್ನು ದೈವೀ ಭಾವದಿಂದ ಪೂಜಿಸುತ್ತಾ ಬಂದಿರುವ ಸಂಸ್ಕೃತಿ ನಮ್ಮ ಹಿರಿಯರದು. ಎಲ್ಲಾ ಜೀವಿಗಳಲ್ಲೂ ಚೈತನ್ಯವನ್ನು, ಶಕ್ತಿಯನ್ನು, ವನ್ಯತೆಯನ್ನು ಆರಾಧಿಸುತ್ತಾ ಬಂದ ನಮ್ಮ ಪೂರ್ವಜರಿಗೆ ಹುಲಿಯ ಚರ್ಮ ಹಣವಾಗಿ ಕಾಣಲಿಲ್ಲ. ಆನೆಯ ದಂತಕ್ಕೆ ಆಸೆಪಟ್ಟವರಲ್ಲ. ನಿಸರ್ಗದೊಂದಿಗೆ ಒಂದಾಗಿ ಬದುಕುವ ಕಲೆಯಲ್ಲಿ ಬಾಳಿ ನೆಮ್ಮದಿಯನ್ನು ಕಂಡರು .

ನಾಗರೀಕತೆಯ ಹೆಸರಿನಲ್ಲಿ ದುರಾಸೆಗೆ ತುತ್ತಾದ ನಾವು ಸ್ವಾರ್ಥಕ್ಕಾಗಿ ಬೃಹತ್ ಕಾಡುಗಳನ್ನು ಕಡಿದು , ಅಣೆಕಟ್ಟೆಗಳನ್ನು ಕಟ್ಟಿದ್ದೇವೆ , ಜನವಸತಿಗಳನ್ನು ನಿರ್ಮಿಸಿದೆವು. ಬದುಕುವ ನೆಲೆಯನ್ನೇ ಕಳೆದುಕೊಂಡ ವನ್ಯಜೀವಿಗಳು ಎಲ್ಲಿಗೆ ಹೋಗಬೇಕು?. ಜನವಸತಿಗೆ ಬಂದ ಒಂದು ಚಿರತೆಯನ್ನು ಜೀವಂತ ಬೆಂಕಿಯಿಟ್ಟು ಸುಟ್ಟಿದ್ದೇವೆ, ಕಾಡಾನೆಗಳಿಗೆ ಪುಂಡಾನೆ ಎಂದು ಹೆಸರು ಕಟ್ಟಿ ಅವುಗಳ ಸ್ಥಳದಿಂದ ಎತ್ತಂಗಡಿ ಮಾಡಿಸಲು ಸಜ್ಜಾಗುತ್ತಿದ್ದೇವೆ. ಸಾವಿರಾರು ಎಕರೆ ಕಾಡನ್ನು ನಮ್ಮ ಯಾವುದೋ ಚಪಲಕ್ಕೆ ಬೆಂಕಿಯಿಟ್ಟು , ವನ್ಯಜೀವಿಗಳ ನೆಲೆಯಲ್ಲೇ ಮನಬಂದಂತೆ ಅವನ್ನು ಕೊಂದೂ ತಿಂದೂ ಮುಗಿಸಿದ್ದೇವೆ.

ನಮ್ಮ ಹಿರಿಯರು ಬದುಕಿದ ಆ ಸರಳ ಬದುಕನ್ನು, ನಿಸರ್ಗದೊಂದಿಗೆ ಒಂದಾಗಿ ಬದುಕುವ ಸಂಸ್ಕೃತಿಯನ್ನು ನಮ್ಮ ಮಕ್ಕಳಿಗೆ ನಾವು ಬದುಕಿ ತೋರಿಸದಿದ್ದರೆ ನಮ್ಮ ಮಕ್ಕಳ ಭವಿಷ್ಯ ಸುಂದರವಾಗದು.

ಬಿಸಿಲೆಯ ಕಪ್ಪೆಕಮ್ಮಟದ ಪೂರ್ಣ ಚಿತ್ರಣವನ್ನು ಶ್ರೀ ಅಶೋಕವರ್ಧನರವರು **ಮಂಡೂಕೋಪಖ್ಯಾನದ ಎರಡನೇ ಮತ್ತು ಅಂತಿಮ ಭಾಗದಲ್ಲಿ** ಸುಂದರವಾಗಿ ಚಿತ್ರಿಸಿದ್ದಾರೆ. "ವೀರಿರಿ. . .ವೀರಿರಿ. . .ವೀರಿರಿ. . . "ಎಂದು ಮೇಲ ಧ್ವನಿಯಲ್ಲಿ ಕೂಗುವ **ಚಿತ್ರಪಕ್ಷಿ**ಯು ಸೊಗಸಾದ ಚಿತ್ರವನ್ನು ಹಕ್ಕಿಲೋಕದಲ್ಲಿ ಅಶ್ವಥ್.ಕೆ.ಎನ್ ರವರು ವರ್ಣಿಸಿದ್ದಾರೆ. ವಿಜ್ಞಾನದ ಕೌತುಕ ವ **ಪಕ್ಷಿಗಳ ಗುಂಪು ಬೇಟೆಯ ಬಗ್ಗೆ ಮುರಳಿ.ಎಸ್ ರವರು ವಿವಿ ಅಂಕಣದಲ್ಲಿ** ಹಂಚಿಕೊಂಡಿದ್ದಾರೆ . ಕಾಂಕ್ರೀಟ್ ಕಾಡಿನ ಮೋಡಿ ಹಾಗೂ ಅದರ ವಿವಿಧ ಆಯಾಮದ **ಕಿಟಕಿಯಲ್ಲಿ ಕಂಡ ದೃಶ್ಯದ ದ್ವಂದ್ವ**ವನ್ನು ಶಂಕರಪ್ಪನವರು **ಐಸೋಟೋಪು** ಕವನದಲ್ಲಿ ವರ್ಣಿಸಿದ್ದಾರೆ

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ಇ-ಮೇಲ್ ವಿಳಾಸ : kaanana.mag@gmail.com

Wildlife Conservation Group

# ಕಪ್ಪೆ ಕಮ್ಮಟ

## (ಮಂಡೂಕೋಪಖ್ಯಾನದ ಎರಡನೇ ಮತ್ತು ಅಂತಿಮ ಭಾಗ)



ಆಗಸ್ಟ್ ಇಪ್ಪತ್ನಾಲ್ಕರ ಅಪರಾತ್ರಿ ಎರಡು ಗಂಟೆಯ ಸುಮಾರಿಗೇ ಬೆಂಗಳೂರಿನಲ್ಲೊಂದು ಕ್ವಾಲಿಸ್ ನಗರದ ವಿವಿಧ ಮೂಲೆಗಳಿಗೆ ಓಡಾಡಿ ಐದಾರು ಬಿಸಿಲೆ 'ಯಾತ್ರಿ'ಗಳನ್ನು ಸಂಗ್ರಹಿಸಲು ತೊಡಗಿತ್ತು. ಮೂರೂವರೆ ಗಂಟೆಯ ಸುಮಾರಿಗದು ನಗರ ಬಿಟ್ಟದ್ದೂ ಆಗಿತ್ತು. ಹಾಗೇ ಇತ್ತ ಮಂಗಳೂರಿನಲ್ಲೊಂದು ಟೆಂಪೋ ಟ್ರಾವಲ್ಲರ್ ಐದು ಗಂಟೆಯ ಸುಮಾರಿಗೆ ಓಡಾಡಿ ಹನ್ನೆರಡು ಮಂದಿಯನ್ನು ಒಟ್ಟು ಮಾಡಿತ್ತು. ಮತ್ತೆ ಜೋಡುಮಾರ್ಗ, ಉಪ್ಪಿನಂಗಡಿಗಳಲ್ಲಿ ಇನ್ನು ಕೆಲವರನ್ನು ಸೇರಿಸಿಕೊಂಡು ಮಳೆಯ ಏಕಧಾರೆಯನ್ನು ಅಡ್ಡಕ್ಕೆ ಕತ್ತರಿಸುತ್ತಾ ಕತ್ತಲೆಯನ್ನು ಉದ್ದಕ್ಕೆ ಸೀಳುತ್ತಾ ದಾರಿ ತೆಮರಿನ ಕಲಕು ನೀರನ್ನು ಆಗಸಕ್ಕೆ ಹಾರಿಸುತ್ತಾ ಬಿಸಿಲೆಯತ್ತ ಹೊರಟದ್ದೂ ಆಯ್ತು. ಆದರೆ ನಾವು ನಾಲ್ವರು, ಬಿಸಿಲೆಯ ಸಮುದಾಯ ಭವನದೊಳಗೆ ಬೆಚ್ಚಗೆ ಮಲಗಿದ್ದವರು ಮಾತ್ರ, ಸುಂದರ ಕನಸುಗಳಲ್ಲಿ, ಕೊಳಕುಕಪ್ಪೆ ಸುಂದರ ರಾಜಕುಮಾರನಾಗಿ ಕತೆ ಕಾಡಿಗೆ ಹೋದ ಮೇಲೇ ಸುಖವಾಗಿ ಬೆಳಗ್ಗೆ ಮಾಡಿದೆವು. ಆರಾಮದಲ್ಲಿ ಪ್ರಾತರ್ವಿಧಿಗಳನ್ನು ಮುಗಿಸಿ, ದೇವೇ ಗೌಡರ ಚಾ ಹಾಕಿ ಯಾರ್ಯಾರು ಎಲ್ಲೆಲ್ಲಿ ಎಂದು ತಿಳಿಯಲು ಚರವಾಣಿಯಲ್ಲಿ ಪ್ರಯತ್ನ ಮಾಡಿದೆವು.

ಮೌರ್ಯ ಸಂಸ್ಥಾಪನಾಚಾರ್ಯ ಚಾಣಕ್ಯ ಹಳ್ಳಿಗಾಡಿನತ್ತ ನಡೆದಿದ್ದನಂತೆ. ಪುಟ್ಟ ದಿಬ್ಬದ ಮೇಲೆ ನಿಂತ ಕುರಿಗಾಹಿಯೊಬ್ಬ "ಮಹಾಸ್ವಾಮಿಗಳು ಬರಬೇಕು. ಪಾದ್ಯಕ್ಕೆ ನೀರು, ತೃಷೆಗೆ ಪಾನಕ, ಹಸಿವೆಗೆ..." ಎನ್ನುತ್ತ ಇಳಿದು ಬಂದನಂತೆ. ಚಾಣಕ್ಯ ಅನಿರೀಕ್ಷಿತ ಸಂಸ್ಕೃತಿ ಸಿಂಚನದಿಂದ ರೋಮಾಂಚನ ಅನುಭವಿಸಿ "ವತ್ಸಾ..." ಎನ್ನುವ ಮೊದಲು, ದಿಬ್ಬವಿಳಿದ ಅದೇ ಕುರಿಗಾಹಿ "ಏನ್ಲಾ ಜುಟ್ಟುಭಟ್ಟ, ಮನೇಲಿ ಮಸಾಲೆ ರುಬ್ಬಕ್ಕೇಳಿ, ಮರಿ ಹೊಡ್ಯಾಕೆ ಬಂದ್ಯಾ..." ಬೇರೇ ವರಸೆ ತೆಗೆದನಂತೆ. ಆಗ ಚಾಣಾಕ್ಷ ಚಾಣಕ್ಯ ಅದು ದಿಬ್ಬದ ಮಹಿಮೆ ಎಂದು ಅರಿವಾಗಿ, ಆ ದಿಬ್ಬವನ್ನು ಅಗೆಸಲಾಗಿ, ಸಂಸ್ಥಾನದ ಯೋಗ್ಯತೆಗೆ ತಕ್ಕುದಾದ ಮಹಿಮಾನ್ವಿತ ಸಿಂಹಾಸನ ಅಲ್ಲಿ ಹುಗಿದಿದ್ದಿತಂತೆ. ತದ್ರೀತಿಯಲ್ಲಿ ಬಿಸಿಲೆ ಅರಣ್ಯ ಇಲಾಖೆಯ ವಸತಿಯ ಎದುರೊಂದು ಮಹಿಮಾನ್ವಿತ ದಿಬ್ಬ - 'ಚಾಣಕ್ಯದಿಬ್ಬ' ಎನ್ನಿ, ಇದೆ. ಇಂದು ಎಲ್ಲ ಸರಿಯಿದ್ದ ದಿನಗಳಲ್ಲಿ ಬಿಸಿಲೆ ಪೇಟೆಯ ಹತ್ತೂ ಸಮಸ್ತರು ಸರತಿಯ ಸಾಲು ಹಿಡಿದು, ದಿಬ್ಬವೇರಿ ಜಗತ್ತಿನ ಮೂಲೆಮೂಲೆಗಳ ವಿದ್ಯಮಾನವನ್ನು ತಮ್ಮ ಮುಷ್ಠಿಯೊಳಗೆ ಆವಾಹಿಸಿಕೊಳ್ಳುತ್ತಿರುತ್ತಾರೆ! ಆದರೆ ಅಂದು ಮಾತ್ರ ವರುಣನ ಅವಕೃಪೆಯಿಂದ, ನಮ್ಮ ಮುಷ್ಠಿಗೆ ಮಹಾಶಕ್ತಿ ಒಲಿಯಲಿಲ್ಲ. ಆದರೆ ಬೀಟೀಸ್ಟಾಟ್‌ನಲ್ಲಿ ಸುಬ್ರಹ್ಮಣ್ಯದ ವಿಶೇಷ

ಕೃಪೆ ಲಭ್ಯ ಎಂಬ ಅರಿವಿನಲ್ಲಿ ನಾವು ಅತ್ತ ವಿಹಾರ ಹೋದೆವು. ಬೆಂಗಳೂರಿನವರು ಹಾಸನದಲ್ಲೂ ಮಂಗಳೂರಿನವರು ನೇರ ತಪ್ಪಲಿನಲ್ಲೂ ಇದ್ದುದರಿಂದ ನಮ್ಮ ಕಾಯುವಿಕೆ ದೀರ್ಘಾಯುಷಿಯೇ ಎಂದುಕೊಂಡು ಮರಳಿದೆವು. ಮಾಡಲು ಇನ್ನೇನೂ ಇಲ್ಲದ್ದಕ್ಕೆ ನಮ್ಮ ಉಪಹಾರದ ಕೊರತೆ **ಮೊ**ದಲು ನೀಗಿಸಿಕೊಂಡೆವು (ದೇವೇ ಗೌಡ ಕೃಪೆ). ಎಂಟೂವರೆಯ ಸುಮಾರಿಗೆ ಬಂದ ಮಂಗಳೂರಿನವರದು ಮುಂದಿನ ಕಂತು. ಅನಂತರ ಅವರೂ ಒಂದು ಸುತ್ತು ಬೀಟೀಸ್ಪಾಟ್ ಭೇಟಿ ಕೊಟ್ಟು, ಸಂಬಂಧಿತರಿಗೆಲ್ಲ ಪ್ರಯಾಣದ ಮತ್ತು (ಕೆಲವರು ಜನ್ಮದಲ್ಲೇ **ಮೊ**ದಲ ಬಾರಿ ಕಾಣುತ್ತಿದ್ದ ಪ್ರಾಕೃತಿಕ ಅದ್ಭುತವನ್ನು) ಸ್ಥಳದ 'ಬಾಲ್ ಟು ಬಾಲ್' ವಿವರಣೆ ಕೊಟ್ಟು ಬಂದರು. ಸುಮಾರು ಹತ್ತೂವರೆಗೆ ಬೆಂಗಳೂರಿನ ತಂಡವೂ ಬಂತು. ಅದು ನಿರೀಕ್ಷೆಗಿಂತ ತಡವಾಯ್ತು ಎನ್ನುವ ಆಕ್ಷೇಪಣೆ ಯಾರಲ್ಲೂ ಇರಲಿಲ್ಲ. ಆದರೆ ಆ ತಂಡದಲ್ಲಿದ್ದ ನಮ್ಮ ಶಿಬಿರದ ಸಂಪನ್ಮೂಲ ವ್ಯಕ್ತಿ ಡಾ| ಕೆ.ವಿ ಗುರುರಾಜ್ (ಕೆವಿಜಿ), ಸುಮಾರು ಅರ್ಧ ಗಂಟೆಯಲ್ಲೇ ಪ್ರಯಾಣದ ಕೊಳೆ ಕಳೆದು, ಉಪಾಹಾರದ ಆವಶ್ಯಕತೆ ಮುಗಿಸಿ, ಕಮ್ಮಟ ಕಲಾಪಕ್ಕೆ ಇಳಿದ ಪರಿ, ಅವರ ಕೆಲಸದ ಪ್ರೀತಿಗೂ ವಿಷಯದ ನಿಷ್ಠೆಗೂ ಹಿಡಿದ ಕನ್ನಡಿ ಎಂದು ಯಾರೂ ಹೇಳಿಯಾರು.



ಭವನದೊಳಗೆ ಎಲ್ಲಾ ನಿಂತುಕೊಂಡೇ ಪರಸ್ಪರ ಪರಿಚಯದ ಔಪಚಾರಿಕತೆ; ಐದೇ ಮಿನಿಟು. (ಕ್ಯಾಪ್ಟನ್ ದೀಪಿಕಾ "It gives me a great pleasure to introduce Dr. KV Gururaj..." ಎಂದಿತ್ಯಾದಿ ಉರು ಹಚ್ಚಿರಬಹುದಾದ ಪರಿಚಯ ಭಾಷಣ ವ್ಯರ್ಥವಾಗಿತ್ತು!) ಮರುಕ್ಷಣದಲ್ಲಿ ಕ್ಷೇತ್ರ ಕಾರ್ಯ ಶುರು. ಮಳೆಕೋಟು, ಕೊಡೆ ಮರೆತವರಿಲ್ಲ. ಬೇಕಾದ್ದು ಕಪ್ಪೆಯಾದರೂ ಜಿಗಣೆ ಸ್ಮರಣೆ ಅತಿಶಯವಾಗಿಯೇ ಇತ್ತು. ಜಿಗಣೆ ಕಾಲ್ಚೀಲದ (ಲೀಚ್ ಸಾಕ್ಸ್ - ಹಿಗ್ಗುವ ಗುಣವಿಲ್ಲದ ದಪ್ಪ ಬಟ್ಟೆಯದು) ಜನಪ್ರಿಯತೆ ಇಂದು ಹಲವರನ್ನು ಮುಟ್ಟಿತ್ತು. ಉಳಿದವರು ಮಾ**ಮೂ**ಲೀ ಉಪ್ಪು, ಡೆಟ್ಟಾಲ್, ಹೊಗೆ ಸೊಪ್ಪುಗಳಲ್ಲದೆ ಮಾ**ಮೂ**ಲೀ ಕಾಲ್ಚೀಲಗಳ ಮೇಲೆ ಕೆಲವು ಬುದ್ಧಿವಂತರು ಇಂಚಗಲದ ಪ್ಯಾಕಿಂಗ್ ಟೇಪನ್ನೇ **ಮೂ**ರು ಸುತ್ತು ಅಂಟಿಸಿದ ಚಂದ ನೋಡಿ ಜಿಗಣೆಗಳೇನು ನಾನೂ ಬೆರಗಾಗಿ ಹೋದೆ. ಪುಟ್ಟ ಪುಸ್ತಕ ಪೆನ್ಸಿಲ್ ಹಿಡಿದು ಅಂಗಳಕ್ಕಿಳಿದಲ್ಲೇ ಪಾಠ ಶುರು.



ಅಂಗಳದ ಹುಲ್ಲು, ಗೊಸರಿನಲ್ಲಿ ಕುಪ್ಪಳಿಸುತ್ತಿದ್ದವ, ಪಕ್ಕದ ಗಿಡದ ಮೇಲಾಡುತ್ತಿದ್ದಾಕೆ, ಮಳೆನೀರ ಹೊಂಡದಲ್ಲಿ ಬೀಸುಬಾಲವೇ ಎಲ್ಲ ಆಗಿದ್ದ ಜೀವ, ಝರಿಯಂಚಿನ ಬಂಡೆಗಂಟಿದವ, ಜಲಸ್ತಂಭನಕ್ಕಿಳಿಯುವ ಮುನ್ನ ಸಿಕ್ಕಿಬಿದ್ದವ, ಉದ್ದ ನಾಮದವ, ಸುಕ್ಕು ಚರ್ಮದವ, ಅಡ್ಡಗಣ್ಣಿನವ, ಹಳದಿಗಾಲಿನವ, ಹುಸಿ ಮರಣ ನಟಿಸಿದವ ಇತ್ಯಾದಿ ಹೆಸರಿಸಿ ಮುಗಿಯದ ವೈವಿಧ್ಯಗಳು ಕೈಸೆರೆಯಾದ್ದೆಲ್ಲಾ ಕಪ್ಪೆಗಳೇ. ಅವುಗಳಿಗೆ ನೋವಾಗದಂತೆ ಹಿಡಿದು, ದೇಹವರ್ಣನೆಗೆ ಬೇಕಾದಂತೆ ಬಿಡಿಸಿ, ಕವುಚಿ, ಮಗುಚುತ್ತಿದ್ದಂತೆಲ್ಲಾ ಆತ್ಮೀಯ ಶೈಲಿಯಲ್ಲಿ ಟಿಪ್ಪಣಿಗಳನ್ನು ಶಿಬಿರಾರ್ಥಿಗಳಿಂದಲೇ ಹೊರಡಿಸುತ್ತಿದ್ದರು ಕೆವಿಜಿ. ಕಪ್ಪೆಯ ಉದ್ದ, ಮೂಗಿನ ಡೊಂಕು, ಕಣ್ಣಿನ ಸೀಳು, (ಕಿವಿ) ತಮಟೆಯ ಬಣ್ಣ, ಚರ್ಮದ ರಚನೆ, ಪಾದದ ಜಾಲ, ಬೆರಳ ತುದಿಯ ಉಬ್ಬು, ಕೆಳತೊಡೆಯ ಸೂಕ್ಷ್ಮವೇ ಮುಂತಾದವುಗಳನ್ನು ತೋರುತ್ತ, ಔಚಿತ್ಯವನ್ನು ಕೆವಿಜಿ ತಿಳಿಸುತ್ತ ಹೋದರು. ನಮ್ಮ ಉತ್ಸಾಹಿಗಳು ಒಂದೇ ಪರಿಸರದಲ್ಲಿ ಧುಮುಕುವಾಗ ಒಂದೇ ಜಾತಿಯ ಮೂರು ನಾಲ್ಕು ಮಾದರಿಗಳು ಸಿಗುವುದಿತ್ತು. ಬರಿಯ ಗಾತ್ರದಲ್ಲಿ ಗುರುತಿಸುವಾಗ ಪ್ರೌಢ, ಮರಿಗಪ್ಪೆಗಳ ವ್ಯತ್ಯಾಸದಲ್ಲಿ ಎಡವುವುದೂ ಇತ್ತು. ಸರಿದಾರಿ ಹಿಡಿದಲ್ಲಿ ಭಲೆ, ಶಹಬ್ಬಾಸ್‌ಗಳೂ ಮುಗ್ಗರಿಸಿದಲ್ಲಿ ಕೈಯಾಸರೆ ಕೊಟ್ಟು ಗಟ್ಟಿಗೊಳಿಸುವ ಕೆವಿಜಿ ಶೈಲಿ ನಿಸ್ಸಂದೇಹವಾಗಿ ಅವರನ್ನು ಸದಾ ಗುಂಪಿನ ನಡುವೆಯೇ ಕಾಣುವಂತಾಯ್ತು.



ಗುರುಗ್ರಹಕ್ಕೆ ಅಸಂಖ್ಯ ಚಂದ್ರರು. ಆದರೂ ಆವರ್ತನ ಚುರುಕು (ಸುಮಾರು ಹತ್ತು ಭೂ ಗಂಟೆಗೆ ಒಂದು ಗುರುದಿನ). ಇನ್ನು ರಾಜರಿಗೋ ಪರಿವಾರ ದೊಡ್ಡದು. ಸಹಜವಾಗಿ ಪರಿಭ್ರಮಣೆ ನಿಧಾನ (ಸುಮಾರು ಹತ್ತು ಭೂವರ್ಷಗಳಿಗೆ ಒಂದು ಗುರುವರ್ಷ). ನಮ್ಮ ಗುರು+ರಾಜರಾದರೋ ವೈಯಕ್ತಿಕ ಚುರುಕಿನಲ್ಲಿ ಹತ್ತಿಪ್ಪತ್ತು ಮಂದಿಯನ್ನು ಸುಧಾರಿಸಿದರೂ ತಂಡ ಸಮುದಾಯ ಭವನದ ವಠಾರ ಬಿಟ್ಟು ನೂರಿನ್ನೂರು ಮೀಟರ್ ಕಳೆಯುವುದರೊಳಗೆ ಅವಧಿ ಎರಡೂವರೆ ಗಂಟೆಯಷ್ಟು ಸಂದು, ಎಲ್ಲರೂ ಮರೆತೇ ಬಿಟ್ಟಿದ್ದ ಊಟದ ಸಮಯವಾಗಿತ್ತು! ಸ್ಥಳವಂದಿಗನಾದ ನನಗೆ ಮೊದಲು ಸಿಕ್ಕ ಸೂಚನೆಯಂತೆ (ಪ್ರಾಕೃತಿಕ ತೊರೆ ದಂಡೆಗೆ ಒಯ್ಯಿರಿ.) ನಾನು ಎಲ್ಲರನ್ನು ಸಮುದಾಯ ಭವನದ ಒತ್ತಿನ ಸವಕಲು ಜಾಡಿನಲ್ಲಿ ಇಳಿಸಿಕೊಂಡು ಹೋಗಿ, ಅಶೋಕವನ ಮುಟ್ಟಿಸುವ ಅಂದಾಜು ಮಾಡಿದ್ದೆ. ಆದರೆ ಬಿಟ್ಟು ಬಿಟ್ಟು ಬರುತ್ತಿದ್ದ ಮಳೆಯೊಡನೆ ಹುಡುಕು ನೋಟ ಬೀರುತ್ತ ಹೆಜ್ಜೆಯಿಕ್ಕುವಾಗ ಅಂಗಳದ ಹುಲ್ಲಿನ ಮೇಲೆ, ಮಳೆನೀರ ಓಟಗಳಲ್ಲಿ, ಮಾರ್ಗದ ತೆಮರುಗಳಲ್ಲಿ, ನಾವು ಮೆಟ್ಟಿ ದಾಟಬೇಕಿದ್ದ ಝರಿಯೊಂದರ ಪಾತ್ರೆಯಲ್ಲಿ ನಮ್ಮೆಲ್ಲ ಸಮಯವನ್ನೂ ಆವರಿಸುವಷ್ಟು ಮಾದರಿಗಳು ಸಿಕ್ಕುತ್ತಲೇ ಇದ್ದವು.



ಆ ಝರಿಯಂತೂ ತನ್ನ ಚಂದ, ಹಸುರಿನ ನೋಟದಲ್ಲಿ ಎಲ್ಲರನ್ನು ಕಟ್ಟಿಯೇ ಹಾಕಿತು ಎಂದರೆ ತಪ್ಪಿಲ್ಲ. ಅದನ್ನು ಎಚ್ಚರದಲ್ಲಿ ಏರುತ್ತ, ಕೆವಿಜಿಯ ಹುಡುಕು ಕಲಾಪಗಳನ್ನು ಅನುಸರಿಸುತ್ತ, ಟಿಪ್ಪಣಿಗಳನ್ನು ದಾಖಲಿಸುತ್ತ ಹೊತ್ತು ಸಂದದ್ದು ಆಶ್ಚರ್ಯವೇ ಅಲ್ಲ. ಹೆಸರು ತುಳಸಿ ಹೋಟೆಲ್. ಆದರೆ ವಾಸ್ತವದಲ್ಲದು ದೇವೇಗೌಡ, ಕಮಲಮ್ಮರ ಮನೆ. ಎದುರಿನ ಎಡ ಕೋಣೆ ಪುಟ್ಟ ಅಂಗಡಿ. ಬಲ ಕೋಣೆಯ ಒಂದು ಮೇಜು, ಆಚೀಚೆ ಎರಡು ಬೆಂಚು, ಎರಡು ಕುರ್ಚಿಗೆ ಮುಗಿದಿತ್ತು ಹೋಟೆಲ್ಲು.

ಅಂಗಡಿಯ ಗಲ್ಲಾದಿಂದ ಹಿಡಿದು, ಹೋಟೆಲಿನ ಅಡುಗೆ, ವಿತರಣೆ ಮತ್ತು ಶುದ್ಧೀಕರಣವೆಲ್ಲ ದಂಪತಿಗಳದೇ. ಪ್ರತ್ಯೇಕ ಸಹಾಯಕರು ಸಿಗುವ ಊರು ಅದಲ್ಲ ಮತ್ತು ಇಟ್ಟುಕೊಳ್ಳುವ ತಾಕತ್ತೂ ಇವರದಲ್ಲ. ನಮ್ಮ ಶಿಬಿರಾವಧಿಯಲ್ಲಿ ಅಲ್ಲೇ ಬಾಣಂತನ ಕಳೆಯುತ್ತಿದ್ದ ಅವರ ಏಕೈಕ ಮಗಳು (ಮತ್ತು ಮೊಮ್ಮಗು) ಸಣ್ಣಪುಟ್ಟ ಸಹಾಯಕ್ಕೆ ಒದಗಿದಷ್ಟೂ ತಂದೆತಾಯರ ಜವಾಬ್ದಾರಿಗೂ ಪಾತ್ರಳೇ ಎನ್ನುವುದನ್ನು ನಾವು ಮರೆಯುವಂತಿಲ್ಲ.



ಆದರೂ ವೈವಿಧ್ಯ, ರುಚಿ, ಶುಚಿ, ಸಮೃದ್ಧಿ ಮತ್ತು ಸಮಯನಿಷ್ಠೆಯಲ್ಲಿ ನಮ್ಮನ್ನು ಎಲ್ಲೂ ಸೋಲಿಸಲಿಲ್ಲ ದಂಪತಿ. ಸಮುದಾಯ ಭವನಕ್ಕೂಅವರ ಹೋಟೆಲ್/ಮನೆಗೂ ಅಂತರ ಸುಮಾರು ಮುನ್ನೂರು ಮೀಟರೇ ಇರಬಹುದು. ಆದರೆ ಮಳೆ, ಗೊಸರೆದ್ದ ನೆಲದಲ್ಲಿ ಊಟ ಸಾಗಿಸಲು ಅಲ್ಲಿದ್ದದ್ದು ದೇವೇಗೌಡರ ಕಾಲ್ಬಲ ಮಾತ್ರ. ಅದನ್ನು ಕಾದು ಕೂರದೇ ಊಟಗಳ ಹೊತ್ತಿಗೆ ಮಾತ್ರ ಕಾರು ಒಯ್ದು ಎಲ್ಲವನ್ನೂ (ದೇವೇಗೌಡರ ಸಹಿತ) ಡಿಕ್ಕಿಗೆ ಹೇರಿಕೊಂಡು ಬರುತ್ತಿದ್ದದ್ದೂ ಒಂದು ಸ್ಮರಣೀಯ ಕಲಾಪವೇ ಆಗಿತ್ತು. ಮಳೆ, ಚಳಿ ಹರಿದುಕೊಂಡು ತಟ್ಟೆ ಹಿಡಿದವರಿಗೆ ಹಬೆಯಾಡುವ ಅನ್ನ, ಪಲ್ಯ, ತಿಳಿಸಾರು, ಚಟ್ನಿ, ಸಾಂಬಾರು, ಹಪ್ಪಳ, ಮಜ್ಜಿಗೆ, ಉಪ್ಪಿನಕಾಯಿ ರಸಗವಳವೇ ಅನ್ನಿಸಿದ್ದು ಸುಮ್ಮನಲ್ಲ. ಬೆಳಗಿನ ತಿಂಡಿ, ಸಂಜೆಯ ಕುರುಕಲು, ಕೇಳಿದಾಗೆಲ್ಲಾ ಚಾ ಹೇಗೆ ನಿರ್ವಹಿಸಿದರೋ ಎಂದು ಬೆರಗುಪಡುವುದಕ್ಕಿಂತ ಶಿಬಿರ ಸಾರ್ಥಕ ಅನಿಸಲು ಇನ್ನೊಂದೇ ದೊಡ್ಡ ಕಾರಣವಾದದ್ದಂತೂ ನಿರ್ವಿವಾದ.



ಕೆಲಸದ ಬದಲಾವಣೆಯೇ ವಿಶ್ರಾಂತಿ ಎಂದು ನಂಬಿದವರಲ್ಲಿ ಕೆವಿಜಿಯೂ ಇದ್ದಾರೆ. ಊಟವಾದ ಮೇಲೇ ಏಏ ಎಂದು ಬಾಯಿಕಳೆದು ಎರಡು ಚಿಟಿಕೆ ಹೊಡೆಯುವವರ ನಿರೀಕ್ಷೆಗೆ ವಿರುದ್ಧವಾಗಿ, ಒಟ್ಟಾರೆ ಸುಮಾರು ಒಂದೇ ಗಂಟೆಯ ಭೋಜನ ಬಿಡುವಿನ ಬೆನ್ನಿಗೆ, ಪಾಠಕ್ಕೆ ಭವನದೊಳಗೇ ಕುಳಿತದ್ದಾಯ್ತು. ಸುಮಾರು ಒಂದೂವರೆ ಗಂಟೆಯದ್ದೊಂದು ಭಾಗ, ಹತ್ತು ಮಿನಿಟಿನ ವಿರಾಮದನಂತರ ಮತ್ತೊಂದು ಗಂಟೆಯ ಭಾಗ. ಭವನದ ಜಗುಲಿಯ ಮರೆಯಲ್ಲಿ (ನಾವೇ ಒಯ್ದಿದ್ದ) ವಿದ್ಯುಜ್ಜನಕ ಚಾಲೂ ಮಾಡಿ, ಒಳಗೆ ವೇದಿಕೆಯ ಹಿಂದಿನ ಶುಭ್ರ ಬಿಳೀ ಗೋಡೆಯ ಮೇಲೆ ಬಿಂಬ **ಮೂ**ಡುವ ವ್ಯವಸ್ಥೆಯೊಡನೆ (ನಮ್ಮದೇ ಪ್ರಾಜೆಕ್ಟರ್), ಕೆವಿಜಿ ತನ್ನ ಲ್ಯಾಪ್ ಟಾಪ್ ಸಹಾಯದೊಡನೆ ಪಾಠಮಾಡಿದರು. ಅಲ್ಲಲ್ಲ, ಆತ್ಮೀಯ ಶೈಲಿಯಲ್ಲಿ ಪಥ ತೋರಿದರು. ಕನ್ನಡದಲ್ಲಿ ಸಹಜವಾಗಿ ತೊಡಗಿದ ಕಲಾಪ, ಶಿಬಿರಾರ್ಥಿಗಳಲ್ಲಿ ಓರ್ವ ಬಂಗಾಳಿ ಮತ್ತೊಬ್ಬ ಒಡಿಸ್ಸಿಯೂ ಇದ್ದುದರಿಂದ ಮುಂದೆ ಅಷ್ಟೇ ಸರಾಗವಾಗಿ ಎಲ್ಲ ಇಂಗ್ಲಿಷಿನಲ್ಲಿ ನಡೆಯುವುದು ಅನಿವಾರ್ಯವಾಯ್ತು. ಕೋಣೆಯೊಳಗೆ ಮತ್ತೂ ಕೆಲವು ಪಾಠಗಳು ಮಾರನೇ ದಿನವೂ ನಡೆಯಿತು. ಅದರಲ್ಲಿ ಒಂದನ್ನು ಕೆವಿಜಿಯ ಪುಸ್ತಕದ ಪ್ರಕಾಶಕನೂ ಆದ, ಅವರಿಗೆ ಸಹಾಯಕನೂ ಆಗಿ ಬಂದಿದ್ದ ಸುಧೀರ್ ನಡೆಸಿದ್ದರು.

ಕಪ್ಪೆಗಳು ಯಾಕೇ ಅಥವಾ ಬೇಕೇ ಎಂಬ ಎಂದೂ ಮುಗಿಯದ ತಾರ್ಕಿಕ ಗುದ್ದಾಟ ಅಲ್ಲಿರಲಿಲ್ಲ; ನಾವೆಲ್ಲ ಜೀವವೈವಿಧ್ಯವನ್ನು ಗೌರವಪೂರ್ಣವಾಗಿ ಒಪ್ಪಿದವರೇ. ಪರಿಸರದ ಉಳಿವು, ಮಾಲಿನ್ಯದ ಹರಹುಗಳಂಥ ವಿಶ್ವವಿಚಾರಗಳ ಅತಿ ವ್ಯಾಪ್ತಿಗೂ ನಾವು ಅಲ್ಲಿ ಹೋಗಲಿಲ್ಲ. ಅನ್ಯ ಕಲಿಕಾ ಶಿಸ್ತುಗಳಿಂದ ಬಂದಿದ್ದ ಉತ್ಸಾಹಿಗಳಿಗೆ ಕಪ್ಪೆಗಳ ಲೋಕಕ್ಕೆ ಆವಶ್ಯಕ ಪ್ರವೇಶಿಕೆ ಅಲ್ಲಿತ್ತು. ಕ್ಷೇತ್ರ ಕಾರ್ಯದ ಕಲಾಪಗಳಿಗೆ ಪೂರಕ ವಿಚಾರಗಳು ತಾಂತ್ರಿಕ ಭಾಷೆಯ ಬಿಗಿತವಿಲ್ಲದೆ ಹರಿದುಬಂತು. ಕಪ್ಪೆಗಳನ್ನು ಸಹಜ ಪರಿಸರದಲ್ಲಿ ಗುರುತಿಸಿ, (ಯಾವುದೇ ಜೀವಹಾನಿಯಾಗದಂತೆ) ಸಂಗ್ರಹಿಸಿ, ಹೊರ ಚಹರೆಗಳಿಂದ ವರ್ಗೀಕರಿಸುವುದು (ವೈಜ್ಞಾನಿಕ ನಾಮಕರಣ ಸೇರಿದಂತೆ) ಪ್ರಾಥಮಿಕ ಪಾಠ. ಹಿಂದಿನ ಹಲವು ವಿದ್ವಾಂಸರುಗಳ ಕೆಲಸ ಮತ್ತು ದಾಖಲೆಗಳ ಸಹಾಯದೊಡನೆ, ಸಂಗ್ರಹಿಸಿದ ಮಾದರಿಗಳ ವಿಕಾಸ ಶೈಲಿ ಮತ್ತು ವರ್ತನ ಕ್ರಮಗಳನ್ನು ಅರಿತುಕೊಳ್ಳುವುದು ಮುಂದಿನ ಹಂತ. ಇದರಲ್ಲಿ ಪ್ರಾಸಂಗಿಕವಾಗಿ ಕೆವಿಜಿ ಸಂಶೋಧನೆ ನಡೆಸಿದ ಕಪ್ಪೆಗಳ ಕಥೆಯೂ ಬಂತು. ಶರಾವತಿ ಕೊಳ್ಳದಲ್ಲಿ ಇವರೇ ವೈಜ್ಞಾನಿಕ ಜಗತ್ತಿಗೆ ಪ್ರಥಮವಾಗಿ ಪರಿಚಯಿಸಿ ಇವರೇ ಇಟ್ಟ 'ಹುಸೇನೀ' (ಹಕ್ಕಿಗಳ ಲೋಕದಲ್ಲಿ ಒಳ್ಳೇ ಕೆಲಸ ಮಾಡಿದವರು ಎಂದು ಇವರು ಗೌರವಿಸುತ್ತಿದ್ದ ವ್ಯಕ್ತಿಯ ಸ್ಮರಣೆಯಲ್ಲಿ) ಎಂಬ ಹೆಸರು ಹೋಗಿ 'ಕರ್ನಾಟಕೆನ್ಸೀಸ್' ಮತ್ತೆ 'ನೀಲ ನೇತ್ರಸ್ಸು' (ದೈಹಿಕವಾಗಿ ಈಗಲೂ ಅದಕ್ಕೆ ನೀಲಕಣ್ಣು ಇದ್ದು, ಹೆಸರು ಅನ್ವರ್ಥಕವಾಗಿಯೇ ಇದ್ದರೂ) ಹೋಗಿ



'ಲ್ಯಾಟಿಯೋಲಸ್' ಕಾರಣಾಂತರಗಳಿಂದ ಬಂದದ್ದನ್ನು ಹೇಳುವಲ್ಲಿ ಕೆವಿಜಿಗೆ ಇದ್ದ ನಿರ್ಮೋಹ ಆಶ್ಚರ್ಯಕರವಾದದ್ದೇ ಸರಿ.

[ಶುದ್ಧ ಅಪ್ರಾಸಂಗಿಕವಾದರೂ ಇಲ್ಲಿ ಒಂದು ಉದಾಹರಣೆ ಹೇಳದಿರಲಾರೆ: 'ಯಡಿಯೂರಪ್ಪ', ಒಬ್ಬ ವ್ಯಕ್ತಿಗೆ ಜೀವನದ ಬಹುಭಾಗವನ್ನು (ಆರು ದಶಕಗಳಿಗೂ ಹೆಚ್ಚು ಪ್ರಾಯ) ಮತ್ತು ನಿರೀಕ್ಷೆಯ ಬಲು ಎತ್ತರವನ್ನೂ ಕಾಣಿಸಿದ ಹೆಸರು. ಆದರೆ ಆ ಎತ್ತರದಲ್ಲಿ ಆ ವ್ಯಕ್ತಿ ಹೆಸರಿನ ಜನಪದ ಹ್ರಸ್ವರೂಪ (ಯಡ್ಡಿ) ಅಥವಾ ಇಂಗ್ಲಿಶ್ ಕಾಗುಣಿತದ 'ಕೊರತೆ'ಯನ್ನು (ನನಗೆ ತಿಳಿದಂತೆ ಯಾವುದೋ ಗಿಣಿರಾಮನಿಗಾಗಿ ಅದೂ ಇಂಗ್ಲಿಷ್ Yadiyurappaದಲ್ಲಿ ಒಂದು ಅಕ್ಷರ ಹೆಚ್ಚು ಕಡಿಮೆ) ತಿದ್ದಿಕೊಳ್ಳುವುದಕ್ಕೆ ಮಾಡಿದ ಸಾರ್ವಜನಿಕ ಮನವಿ, ಹೊರಡಿಸಿದ ಪತ್ರಿಕಾ ಪ್ರಕಟಣೆ ನಿಜಕ್ಕೂ ನಾಚಿಕೆಗೇಡು.]

ಕಪ್ಪೆಗಳು ನಿಜಾರ್ಥದ ದ್ವಿಜ (ಗೊದಮೊಟ್ಟೆಯ ಅವಸ್ಥೆ ನೀರಿನದು, ಪ್ರೌಢಾವಸ್ಥೆ ವಾಯುಮಂಡಲದು) ಎಂದೇ ಗುರುತಿಸಿದ್ದ ನಮ್ಮ ಪುರಾಣಿಕರ ಪ್ರಕೃತಿ ವೀಕ್ಷಣಾ ಚಾತುರ್ಯಕ್ಕೆ ಕೆವಿಜಿ ಮಾತಿನಲ್ಲಿ ಪ್ರಶಂಸೆಯಿತ್ತು. ವ್ಯತಿರಿಕ್ತವಾಗಿ ವರ್ತಮಾನದ ಸಮಾಜ, ರಾಸಾಯನಿಕ ಕೀಟನಾಶಕಗಳ ಅಮಲಿನಲ್ಲಿ ಪ್ರಕೃತಿದತ್ತ ಈ ಕಾವಲುಗಾರನ ನಷ್ಟವನ್ನೇ ಗಣಿಸದಿರುವ ಉಡಾಫೆಯ ಬಗ್ಗೆ ಖೇದವೂ ಇತ್ತು. ಉಭಯಚರಿಗಳ ಕುರಿತು ನಾವು ಈವರೆಗೆ ತಿಳಿದದ್ದಕ್ಕಿಂತ ಭಾರೀ ವಿಚಾರಗಳು ಇನ್ನೂ ತಿಳಿಯುವುದಕ್ಕೆ ಬಾಕಿಯಿದೆ ಎನ್ನುವುದನ್ನಂತೂ ಕೆವಿಜಿ ಸಾಂದರ್ಭಿಕವಾಗಿ, ತಿಳುವಳಿಕಸ್ತನ ವಿನಯದಲ್ಲಿ ಮತ್ತೆಮತ್ತೆ ಹೇಳುತ್ತಿದ್ದರು.

[ಮತಮಾರುಕಟ್ಟೆಯಲ್ಲಿ ಗೆದ್ದ ಜನನಾಯಕನೊಬ್ಬ "ನಮ್ಮ ಭಾರತ ಎಷ್ಟು ದೊಡ್ಡದೆಂದರೆ, ರೆ, ರೆ ನನಗೇ ಗೊತ್ತಿಲ್ಲ" ಎಂದನಂತೆ. ಇದು ವಿಚಾರ ದಾರಿದ್ರ್ಯದ ಸಂಕೇತ. ಅದೇ ವಿಜ್ಞಾನಿಯೊಬ್ಬ ಖಚಿತವಾಗಿ "ಗೊತ್ತಿಲ್ಲ" ಎನ್ನುವುದು ವಿಷಯದ ಅಂದಿನ ತಿಳುವಳಿಕೆಯ ಮಿತಿ. ವಿಜ್ಞಾನದ ವಿನಯವನ್ನು ದುರಾಜಕೀಯದ ಲಾಭಕ್ಕೆ ಬಳಸುವಲ್ಲಿ ನಿರ್ಲಜ್ಜ 'ಉಭಯಚರಿ'ಗಳು ಅರ್ಥಾತ್ ಕಳ್ಳ ಜ್ಯೋತಿಷಿಗಳು, ಅವರನ್ನು ಮುಂದೆ ಬಿಟ್ಟು ತಮ್ಮ ಗ್ರಾಹಕ ಬಳಗ ಹೆಚ್ಚಿಸಿಕೊಳ್ಳುವ ಸಂಪರ್ಕ ಮಾಧ್ಯಮಗಳು ಇಂದಿನ ಬಲುದೊಡ್ಡ ಸಾಮಾಜಿಕ ದುರಂತ] ಕಪ್ಪೆಗಳು ಬರಿಯ ನೋಟದಲ್ಲಿ ಹೇಳುವುದಾದರೆ ಕೊಳಕಾಗಿ ತೋರುವುದಿರಬಹುದು. ಆದರೆ ಅವುಗಳಲ್ಲಿನ ಹಸಿಹೊಳೆತ, ಒಣಸುಕ್ಕು ಮುಂತಾದ ವರ್ಣ ಮತ್ತು ರಚನಾ ವೈವಿಧ್ಯಗಳಲ್ಲಿ ಕೆಲವೊಂದರ ಪ್ರಾಕೃತಿಕ ಔಚಿತ್ಯವನ್ನು ಕೆವಿಜಿ ಬಿಡಿಸಿಟ್ಟರು. ಇದರಿಂದ "ಸುಂದರ ತ್ವಚೆಗಾಗಿ" ಎಂಬ ಭ್ರಮೆಯಲ್ಲಿ ನೂರೆಂಟು ರಾಸಾಯನಿಕಗಳನ್ನು (ಸೋಪು, ಬೇಸು, ಟಾಪು ಎಂದೇನೆಲ್ಲಾ ಹೇಳಿಕೊಂಡು) ಸುರಿದುಕೊಳ್ಳುವ ನಾವು ವಿಕಾಸಪಥದಲ್ಲಿ ಎಷ್ಟು ಹಿಂದುಳಿದವರು ಮತ್ತು ಅಜ್ಞಾನಿಗಳು ಎನ್ನುವ ಬೆರಗು

**ಮೂ**ಡಿತು. ನಮಗೆ ಕಂಡಂತೆ ಪಾರಿಸರಿಕವಾಗಿ ಕೊಳಕಾದ ನೀರಿನಲ್ಲೂ (ಕೆಲವು ಜಾತಿಯ) ಕಪ್ಪೆಗಳು ನಿರ್ಬಾಧಿತವಾಗಿ ಜೀವನಚಕ್ರ ಉರುಳಿಸುವ ಪರಿಯನ್ನು ಗುರುರಾಜ ಮಾರ್ಮಿಕವಾಗಿ ವಿವರಿಸಿದರು. ಆಗ ಶಿಷ್ಯವೃಂದದಲ್ಲೊಬ್ಬನಿಗೆ ಸಹಜವಾಗಿ **ಮೂ**ಡಿದ ಸಂಶಯ 'ಅಂದರೆ ಅಭಿವೃದ್ಧಿಯು ಸಹನೀಯ ಮಿತಿ ಮೀರಿಲ್ಲ.' ಇದನ್ನು ಬಗೆಹರಿಸುವಲ್ಲಿ ಕೆವಿಜಿ ವಿಜ್ಞಾನಿಯಾಗಿ ತಳೆದ ನಿಲುವು ಗಮನಾರ್ಹ. ವಿಜ್ಞಾನ ಕಂಡಷ್ಟನ್ನೇ ಹೇಳುತ್ತದೆ. ಅದರ ಅರ್ಥವನ್ನು ಸಾಮಾಜಿಕ ಹಿತಾಹಿತ ಗಣಿಸಿ ಪ್ರಚುರಿಸುವ ವಿವೇಚನೆ ಪತ್ರಿಕೋದ್ಯಮದ್ದಾಗಬೇಕು.

[ಭಾರತದಲ್ಲಿ ೨% ಮಾತ್ರ ಪ್ರಾಕೃತಿಕ ಕಾಡು ಉಳಿದಿದೆ ಎನ್ನುತ್ತಾನೆ ವನ್ಯಪ್ರೇಮಿ. ಇಲ್ಲಾ ೩೫% (ಅಥವಾ ಇನ್ನೂ ಹೆಚ್ಚು) ಹಸಿರಹೊದಿಕೆ ಇದೆ (ಏಕ ಬೆಳೆಯ ತೋಟ, ಹೊಲ, ಗದ್ದೆ ಸೇರಿಸಿ) ಎನ್ನುತ್ತಾನೆ 'ಅಭಿವೃದ್ಧಿಪರ' ಪುಡಾರಿ. ಎರಡನ್ನೂ ತೂಗಿ ನುಡಿಯುವುದು ಜವಾಬ್ದಾರಿಯುತ ಪತ್ರಿಕೋದ್ಯಮ.]

ಕೆಲವು ಕಪ್ಪೆಗಳ ಚರ್ಮ ಸನ್ನಿವೇಶಕ್ಕೆ ತಕ್ಕಂತೆ ಸೂಸುವ ವಿಷ, ತಳೆಯುವ ಬಣ್ಣಗಳೂ ಚರ್ಚೆಯಲ್ಲಿ ಬಂದವು.

[ಇಷ್ಟಾಗಿಯೂ ಸಾಮಾನ್ಯವಾಗಿ ಕಪ್ಪೆಗಳ ವಿಷ ಮನುಷ್ಯನನ್ನು ಬಾಧಿಸುವುದು ಕಡಿಮೆಯಂತೆ. ಆದರೆ ಸಾಮೂಹಿಕ ಅಡುಗೆಗಳಲ್ಲಿ ಅನ್ಯ ಕಾರಣಗಳಿಗೆ ವಿಷಪ್ರಭಾವ ಕಾಣಿಸಿದಾಗೆಲ್ಲಾ 'ಜಾಣ'ರು ಸತ್ತ ಕಪ್ಪೆಯನ್ನೋ ಅಷ್ಟೇ ನಿಷ್ಪಾಪಿಯಾದ ಹಲ್ಲಿಯನ್ನೋ ದೂಷಿಸುವುದು ನಡೆದೇ ಇದೆ. ಅಂಥಾ ಮಹಾ ಆನೆ, ಹುಲಿಗಳಿಗೇ ಇಲ್ಲದ ನ್ಯಾಯ ಕೇಳುವ ಧ್ವನಿ ಬಡ ಕಪ್ಪೆಗಳಿಗೆಲ್ಲಿ ಬರಬೇಕು! ಕೆವಿಜಿಯೇ ಹೇಳಿದ ಮತ್ತೊಂದು ವಿಚಾರ - ಕೆಲವೊಂದು ಜಾತಿಯ ಕಪ್ಪೆಗಳ ಬೆನ್ನಿನ ವಿಷಸ್ರವಿಕೆಯನ್ನು ನೆಕ್ಕಿಯೇ ಗುರುತಿಸುವ ವಿಜ್ಞಾನಿಗಳು ಇನ್ನೂ ಆರೋಗ್ಯಕರವಾಗಿ ಬದುಕಿಯೇ ಇದ್ದಾರೆ!]

ಕಪ್ಪೆಗಳ ಉಲಿ, ಸಂತಾನಕ್ರಿಯೆಯ ಕಲಾಪಗಳು, ಜೀವನಚಕ್ರದ ಅದ್ಭುತಗಳು ಬೀಸು ನೋಟಕ್ಕಷ್ಟೇ ಸಿಕ್ಕರೂ ತೆರೆದಿಟ್ಟ ಪ್ರಪಂಚ ಬಲು ವಿಸ್ತಾರ. ನೀರು, ನೆಲ, ಪಾತಾಳದಲ್ಲೂ (ಕೇರಳದ ಒಂದು ಕಪ್ಪೆ ಜಾತಿ, ಸುಮಾರು ಎಂಟು ಮೀಟರ್ ಆಳಕ್ಕೆ ಸ್ವತಃ ಮಾಟೆ ತೋಡಿ ವಾಸಿಸುತ್ತದಂತೆ. ವರ್ಷಕ್ಕೆ ಯಾವುದೋ ನಿಯತವೇಳೆ - ಒಂದೋ ಎರಡೋ ಬಾರಿಮಾತ್ರ, ಮೇಲಕ್ಕೆ ಬಂದು ಸಂತಾನೋತ್ಪತ್ತಿಯ ಕ್ರಿಯೆ ಮುಗಿಸಿ ಮರಳುತ್ತವಂತೆ) ಹುಲ್ಲು, ಗಿಡ, ಮರಗಳ ಹಸಿರಿನ ವಿವಿಧ ಔನ್ನತ್ಯಗಳಿಗೆ ಮೀಸಲಾಗಿಯೇ ವಿಕಾಸಗೊಂಡ ಕಪ್ಪೆಗಳು ಇವೆ. ಹೀಗೇ ಕಪ್ಪೆಯ ಕುರಿತ ಪಾಠದ ಮತ್ತೆ ಈಗಲೂ ಕೆವಿಜಿ ಮಿಂಚಂಚೆ **ಮೂ**ಲಕ ಭಾಗಿಗಳಿಗೆ ಕಳಿಸುತ್ತಿರುವ ವಿವಿಧ ಮಾಹಿತಿ **ಮೂ**ಲಗಳ ಜಾಡು ಹಿಡಿದರೆ ನನ್ನ ಪಾತ್ರೆ**ಯೂ** ಸಾಲದು, ಈ ಕಥೆ**ಯೂ** ಮುಗಿಯದು! ಹಾಗಾಗಿ ಇನ್ನು ಸಜ್ಜುಗೊಳ್ಳಿ ನಿಶಾಚರತ್ವಕ್ಕೆ.

- ಮುಂದುವರೆಯುವುದು. . . .





# ಹಕ್ಕಿ ಲೋಕ

## ಚಿತ್ರಪಕ್ಷಿ ಮತ್ತು ಅಣ್ಣ

**ವೈಜ್ಞಾನಿಕ ಹೆಸರು:** *Pericrocotus cinnamomeus*

**ಇಂಗ್ಲೀಷ್ ಹೆಸರು:** Small Minivet




ಅದು ಏಪ್ರಿಲ್-ಮೇ ತಿಂಗಳಿರಬೇಕು, ಮರ-ಗಿಡಗಳೆಲ್ಲ ಬೋಳಾಗಿ ಕೆಲವೊಂದು ಚಿಗುರುತ್ತಿದ್ದವು, ಕೆಲವೊಂದು ಹೂ ಬಿಡುತ್ತಿದ್ದವು, ಕಾಡಿನ ಗಿಡ-ಮರಗಳೆಲ್ಲ ತನ್ನ ಎಲೆಗಳನ್ನು ಉದುರಿಸಿ ಕರ್ರಗೆ ಬೂದು ಬಣ್ಣದಿಂದ ಮಂಕುಬಡಿದಂತೆ ಭಾಸವಾಗುತ್ತಿತ್ತು. ಅಲ್ಲಲ್ಲಿ ಹೊಗೆಯಿಲ್ಲದ ಬೆಂಕಿಬಿದ್ದಿರುವಂತೆ ಮುಗಿಲೆತ್ತರಕ್ಕೆ ನಿಂತಿರುವ ಮುತ್ತುಗದ ಮರಗಳ ಹೂವು ಕಣ್ಣಿಗೆ ಬೆಂಕಿಯಂತೆ ಕಾಣುತ್ತಿದ್ದವು, ಕಕ್ಕೆ ಮರವೂ ತಾನೇನು ಕಡಿಮೆಯೇ ಎಂಬಂತೆ ಒಂದೇ ಒಂದು ಎಲೆಯಿಲ್ಲದಂತೆ ಉದುರಿಸಿ ಬರೀ. . .ಹಳದಿಯ ಗುಂಚಗಳ ಬಣ್ಣವನ್ನು ಅಲ್ಲಲ್ಲಿ ಚೆಲ್ಲಿತ್ತು.

ಆಗ ನಾನು ಬಹಳ ಚಿಕ್ಕವನು ಐದನೇ ತರಗತಿಯಲ್ಲಿ ಓದುತ್ತಿದ್ದೆ, ಬಣ್ಣಗಳೆಂದರೆ ಬಹಳವಿಷ್ಟ. . .! ಶಾಲೆಯಲ್ಲಿ ಸರ್ಕಾರದಿಂದ ಕೊಡುತ್ತಿದ್ದ ಉಚಿತ ಪಠ್ಯಪುಸ್ತಕಗಳಲ್ಲಿನ ಬಣ್ಣ ಬಣ್ಣದ ಚಿತ್ರಗಳನ್ನು ತುಂಬ ಖುಷಿಯಿಂದ ನೋಡುತ್ತಿದ್ದೆ. ಕನ್ನಡ ಪುಸ್ತಕದಲ್ಲಿರುತ್ತಿದ್ದ ಹಳದಿಯ ಹಲಸು, ಕೆಂಪುಮಿಶ್ರಿತ ಹಳದಿಯ ಮಾವು, ಹಸಿರು ಹಳದಿಯ ಪರಂಗಿ, ಕಪ್ಪುದ್ರಾಕ್ಷಿ, ಕೆಂಪು ಗುಲಾಬಿ, ಹಳದಿ ಡೇರೆ, ಹಳದಿ-ಬಿಳಿಯ ನೈದಿಲೆಗಳು ಮತ್ತು ಬಣ್ಣ ಬಣ್ಣದ ಪಕ್ಷಿಗಳು. ಅವು ತುಂಬ ಖುಷಿ ನೀಡುತ್ತಿದ್ದವು. ಹೊಸ ಪುಸ್ತಕವನ್ನು ಗಲೀಜು ಮಾಡದೆ ಹಾಗೇ ಬೈಂಡಿಂಗ್ ಮಾಡಿ ಜೋಪಾನ ಮಾಡುತ್ತಿದ್ದೆ.

ನನ್ನ ಅಣ್ಣನಿಗೆ ಪಕ್ಷಿಗಳೆಂದರೆ ಎಲ್ಲಿಲ್ಲದ ಪ್ರೀತಿ, ಮನೆಯಲ್ಲಿ ವಿವಿಧ ಜಾತಿಯ ಕೋಳಿಗಳಿಂದ ಹಿಡಿದು, ಪಾರಿವಾಳ, ಹಸಿರುಹಕ್ಕಿ (ಸ್ಮಾಲ್ ಬೀ ಈಟರ್), ಗೌಜಲು, ಮುಂತಾದ ಹಕ್ಕಿಗಳನ್ನು ತಂದು ಸಾಕುತ್ತಿದ್ದ, ಅವುಗಳಿಗೆ ಪ್ರತ್ಯೇಕ ಗೂಡುಗಳನ್ನು ಮಾಡುತ್ತಿದ್ದ. ಅಣ್ಣನಿಗೆ ಮತ್ತೊಂದು ತೆವಲು, ಅದು ಹಕ್ಕಿಗಳ ಶಿಕಾರಿ, ಕ್ಯಾಟರ್ ಬಿಲ್ಲು ಶಿಕಾರಿ ಎಂದರೆ ಸರಿ, ಕ್ಯಾಟರ್ ಬಿಲ್ಲು ಎಂದರೆ ಒಂದು ಕವಲು ಇರುವ ಕೊಂಬೆಯನ್ನು ಕಡಿದು, ಕೊಕ್ಕೆ ಮಾಡಿಕೊಂಡು, ಅದಕ್ಕೆ ಸೈಕಲ್ ಟ್ಯೂಬಿನ ಎರಡು ಪಟ್ಟಿಗಳನ್ನು ಗಟ್ಟಿಯಾಗಿ ಕವಲಿಗೆ ಬಿಗಿದು ರಬ್ಬರಿನ ತುದಿಯಲ್ಲಿ ಚರ್ಮದ ಚಪ್ಪಲಿಯ



ಮೂರು ಇಂಚು ಅಳತೆಯ ಪಟ್ಟಿಯನ್ನು ಕತ್ತರಿಸಿಕೊಂಡು ಬಿಗಿಯಾಗಿ ಕಟ್ಟಿ ತಯಾರಿಸಿಕೊಳ್ಳುತ್ತಿದ್ದ. ಕಟ್ಟಲು ನಾನು ಸಹಾಯ ಮಾಡುತ್ತಿದ್ದೆ. ಅದು ನನಗೆ ಪಕ್ಷಿಗಳನ್ನು ಹಿಡಿದು ಕೊಡುತ್ತಾನೆ ಎಂಬ ಆಸೆಗೆ, ಅಣ್ಣ ಎಂದೂ ಕೂಡ ಜೀವಂತವಾಗಿ ಹಕ್ಕಿಗಳನ್ನು ಹಿಡಿದುಕೊಡದಿರುವುದು ನನಗೆ ಬೇಸರದ ಸಂಗತಿ. . .! ಅವನ ಶಿಕಾರಿಯ ದಿನಗಳಲ್ಲಿ ಒಂದೆರಡು ಹಕ್ಕಿಗಳನ್ನು ಮಾತ್ರ ಜೀವಂತವಾಗಿ ನೀಡಿದ್ದು ನೆನಪಿದೆ.

ಒಂದು ಬಾರಿ ಅಣ್ಣನ ಜೊತೆ ಹಕ್ಕಿ ಹೊಡೆಯಲು ಹೋದಾಗ ಒಂದು ಅತ್ಯಂತ ಸುಂದರವಾದ ಬಣ್ಣ ಬಣ್ಣದ ಸಣ್ಣ ಹಕ್ಕಿಯನ್ನು ನೋಡಿದೆ. "ವೀರಿರಿ. . .ವೀರಿರಿ. . .ವೀರಿರಿ. . . "ಎಂದು ಮೇಲ ಧ್ವನಿಯಲ್ಲಿ ಕೂಗುತ್ತಾ ಎರಡು ಪಕ್ಷಿಗಳು ಮರದಿಂದ ಮರಕ್ಕೆ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತಾ. . . ಹಾರಡುತ್ತಿದ್ದವು. ಪಿಕಳಾರಕಿಂತ ಚಿಕ್ಕದಾದ ಬಿಳಿಮಿಶ್ರಿತ ಕಡು ಕೇಸರಿ, ಕಪ್ಪುಹಕ್ಕಿ. ಎದೆ, ಹೊಟ್ಟೆ ಹಾಗೂ ತಳಭಾಗ ಬಿಳಿ ಮಿಶ್ರಿತ ಕೇಸರಿ ಬಣ್ಣ, ಕಪ್ಪುರೆಕ್ಕೆ ಮೇಲೆ ಕಡು ಕೇಸರಿ ಪಟ್ಟಿಯಿದೆ. ನೀಳವಾದ ಬಾಲವಿದೆ, ಕೊಕ್ಕು, ಕಾಲುಗಳು ಕಪ್ಪಗಿರುತ್ತದೆ. ಹೆಣ್ಣು ಪಕ್ಷಿಯ ಕತ್ತು, ಎದೆ, ಹೊಟ್ಟೆ ಹಳದಿ. ಉಳಿದ ಭಾಗವೆಲ್ಲ ಬೂದುಬಣ್ಣವಾಗಿದ್ದು, ನಾನು ಅಣ್ಣನಿಗೆ ಹಟವಿಡಿದೆ ಅ ಹಕ್ಕಿಗಳು ಬೇಕು ಎಂದು. ಕ್ಷಣರ್ಧದಲ್ಲಿ ಹೊಡೆದು ಕೊಟ್ಟ! ರೆಕ್ಕೆಗೆ ಪೆಟ್ಟು ಬಿದ್ದಿತ್ತು. ಆದರೆ ಅವು ಎರಡೆ ದಿನಕ್ಕೆ ಪ್ರಾಣಬಿಟ್ಟಿದ್ದು ತುಂಬ ಬೇಸರ. . .!

ದೊಡ್ಡವನಾಗಿ ಬುದ್ದಿಬಂದ ಮೇಲೆ ಪಕ್ಷಿಗಳ ಬಗ್ಗೆ ಅಧ್ಯಾಯ ಮಾಡಬೇಕು ಎಂಬ ಆಸಕ್ತಿ, ಪಕ್ಷಿ ವೀಕ್ಷಣೆ ಮತ್ತು ಪಕ್ಷಿಗಳ ಛಾಯಚಿತ್ರಗಳನ್ನು ತೆಗೆಯಲು ಶುರುವಾದಾಗ ತಿಳಿದಿದ್ದು. ಆ ಹಕ್ಕಿಗಳು ಮಿನಿವೆಟ್ ಹಕ್ಕಿಗಳೆಂದು, ಕನ್ನಡದಲ್ಲಿ ಇವುಗಳನ್ನು "ಚಿತ್ರಪಕ್ಷಿ" ಎಂದು ಕರೆಯುತ್ತಾರೆ. ಇವು ನಾರು, ಬೇರು, ಜೇಡರ ಬಲೆ, ಮುಂತಾದ ವಸ್ತುಗಳಿಂದ ಬಟ್ಟಲಿನಾಕಾರದ ಗೂಡನ್ನು ಕಟ್ಟಿ, ಕಡುಕಂದು ಚುಕ್ಕಿಗಳಿರುವ ಎರಡರಿಂದ ನಾಲ್ಕು ತಿಳಿ ಹಸಿರು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.

ಆದರೆ ಅಣ್ಣ ಗುರಿ ಇಡುವುದರಲ್ಲಿ ತುಂಬ ನಿಪುಣ. . .! ಇಂತಹ ಹಕ್ಕಿಬೇಕು ಹೊಡೆದುಕೊಡು ಎಂದು ಹಹಿಡಿದರೆ ಕ್ಷಣರ್ಧದಲ್ಲಿ ಹೊಡೆದು ತರುತ್ತಿದ್ದ. . .! ಆದರೆ ಜೀವಂತವಾಗಿ ಮಾತ್ರವಲ್ಲ. . .ಸತ್ತ ಹೆಣವಾಗಿ. . .! ಅಣ್ಣ ಮಿನಿವೆಟ್ ಗಳನ್ನು ಮನೆಗೆ ತಂದಿದ್ದ, ಆದರೆ ಹಕ್ಕಿಯ ರೆಕ್ಕೆಗೆ ಪೆಟ್ಟು ಬಿದ್ದಿತ್ತು. ಒಂದೆರಡು ದಿನ ಮಾತ್ರ ಜೀವಾಂತವಾಗಿದ್ದವು ನಂತರ ಪರಲೋಕ ಸೇರಿಕೊಂಡವು ಬಿಡಿ, ಅದು ಬೇಸರದ ಸಂಗತಿ. ಅಣ್ಣ ಒಮ್ಮೆ ದುರ್ಗನ ಬಳಿ ಬಂದೂಕಿನ ಗುರಿಕಲಿಯಲು ಹೋಗಿದ್ದಾಗ, ದುರ್ಗನ ಯಾವುದೋ ದ್ವೇಷಕೋ ಏನ್ನೋ ನಾಡ ಬಂದೂಕಿಗೆ ಬೆರುಳುಗಳ ಲೇಕ್ಕಾಚಾರದಲ್ಲಿ ಲೋಡ್ ಮಾಡಬೇಕು. ಪಕ್ಷಿಗಳಿಗೆಂದರೆ ಎರಡು ಬೆರಳು, ಮೊಲಕ್ಕೆಂದರೇ ಮೂರು ಬೆರಳು, ಹಂದಿಯಾದರೆ ಐದು ಬೆರಳು, ಎಂಬ ಲೆಕ್ಕಾಚಾರದಲ್ಲಿ ಮದ್ದು ಗುಂಡುನ್ನು ತುಂಬಬೇಕು, ಆರು ಬೆರಳಿಗಿಂತ ಹೆಚ್ಚು ತುಂಬಿದರೆ ಅದು ಅಪಾಯ. . .! ಯಾವುದೋ ಮರದ ತುದಿಯಲ್ಲಿ ಕುಳಿತಿರುವ ಬೆಳವನಂತಹ ಕಾಡು ಪಾರಿವಾಳ ಹೊಡೆಯಲು ಬರೀ ಎರಡು ಬೆರಳು ಮದ್ದು-ಚರೆ ಸಾಕು. ಆದರೆ ಎರಡು ಬೆರಳು ಮದ್ದು-ಗುಂಡಿಗೆ ಬದಲಾಗಿ ಎಂಟು ಬೆರಳು ಲೋಡ್ ಮಾಡಿ ನೀಡಿದ್ದು ದುರ್ಗ. . .! ಹಕ್ಕಿಗೆ ಗುರಿಹಿಡಿದು ಡಂ . . .ಎಂದದ್ದೆ ತಡ! ಹಕ್ಕಿಯ ದೇಹ ಪುಡಿ ಪುಡಿಯಾಗಿ ರೆಕ್ಕೆ-ಪುಕ್ಕಗಳು ಮಾತ್ರ ಅಂತರಾಟದಲ್ಲಿ ಹಾರಿ ಗಾಳಿಯಲ್ಲಿ ತೇಲಿ ದೂರ ಹೋಗುತ್ತಿದ್ದವು. ಅಣ್ಣನ ಎದೆಗೆ ಪೆಟ್ಟು ಬಿದ್ದು ಅಷ್ಟು ದೂರದಲ್ಲಿ ಬಿದ್ದಿದ್ದ . . .!

ಪ್ರತಿವರ್ಷ ದಸರ ಹಬ್ಬದಲ್ಲಿ ಗುರಿಯಿಡುವ ಸ್ಪರ್ಧೆ ನಡೆಯುತ್ತಿತ್ತು. ಸುತ್ತಮುತ್ತಲಿನ ಹಳ್ಳಿಗಳ ಎಲ್ಲಾ ಗುರಿಕಾರರು ಬಂದು ಭಾಗವಹಿಸುತ್ತಿದ್ದರು. ಸುಮಾರು ಎತ್ತರದಲ್ಲಿ ತೆಂಗಿನ ಕಾಯಿಯನ್ನು ಕಟ್ಟುತ್ತಿದ್ದು ಸ್ಪರ್ಧಿಗಳು ಒಂದೇ ಏಟಿಗೆ ತೆಂಗಿನ ಕಾಯಿಯನ್ನು ಹೊಡೆದುರುಳಿಸಬೇಕು. ಪ್ರತಿ ಸಾರಿಯು ದುರ್ಗನೇ ಗೆಲುತ್ತಿದ್ದ. ಆದರೆ ದುರ್ಗನನ್ನು ಮೀರಿಸಿ




ಗುರಿಯಿಟ್ಟು ಹೊಡೆದದ್ದು ದುರ್ಗನಿಗೆ ನಾಚಿಕೆಯಾಯಿತು. ಅಂತಹ ಗುರಿಕಾರನಾಗಿದ್ದ. ಈಗ ಅಣ್ಣ ಸಂಸಾರ ತಾಪತ್ರೈಗಳಲ್ಲಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಮುಳುಗಿ ಹೋಗಿದ್ದಾನೆ. ನಾನು ಹಕ್ಕಿಗಳ ಫೋಟೊಗ್ರಫಿ, ಸ್ಟಡಿಯಲ್ಲಿ ತೊಡಗಿದ್ದೇನೆ. ಅದಕ್ಕೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಸ್ಫೂರ್ತಿಯಾದರೆ ಅಣ್ಣನ ಪಾಲು ದೊಡ್ಡದು. ಅಣ್ಣನ ಹಕ್ಕಿ ಶಿಕಾರಿಯಿಂದ ಒಬ್ಬ ಪಕ್ಷಿಪ್ರೇಮಿಯಾಗಿ ಹೊರಬಂದಿದ್ದೇನೆ. ಅಣ್ಣನಿಗೆ ಧನ್ಯವಾದಗಳು ಹೇಳಲೇ ಬೇಕು.



# ವಿದ್ಯಾರ್ಥಿಗಾಗಿ ವಿಜ್ಞಾನ

## * ಪಕ್ಷಿಗಳ ಗುಂಪು ಬೇಟೆ

ಕೆಲವೊಮ್ಮೆ ನಮ್ಮ ಸುತ್ತಮುತ್ತಲಿನ ಹೊಲ-ಗದ್ದೆ, ತೋಟ, ಕಾಡು, ಮನೆಯ ಪಕ್ಕದಲ್ಲಿನ ಬೇಲಿಗಳಲ್ಲಿ ತರಗೆಲೆ ಹಕ್ಕಿ, ಎಲೆಹಕ್ಕಿ, ಅರಿಶಿನ ಬುರುಡೆ, ಮಡಿವಾಳ, ಕಾಜಾಣ, ನೀಲಕಂಠ, ಪಿಕಳಾರಗಳಂತಹ ಹಕ್ಕಿಗಳು ಒಂದೇ ಗುಂಪಿನಲ್ಲಿದ್ದು, ತುಂಬ ಗಲಾಟೆಮಾಡುತ್ತಿರುವುದನ್ನು ನಾವು ಗಮನಿಸಿರಬಹುದು. ಪೊದೆ ಮತ್ತು ಮರಗಳಲ್ಲಿ ಕುಪ್ಪಳಿಸುತ್ತಾ ಗಲಾಟೆ ಮಾಡುತ್ತಾ ಅಲ್ಲಿರುವ ಕ್ರಿಮಿ-ಕೀಟಗಳನ್ನು ಕಲಹ ರಹಿತವಾಗಿ ಸಾಮೂಹಿಕ ಬೇಟೆಯಾಡುತ್ತವೆ.

ಮತ್ತು ಇನ್ನೂ ಕೆಲವೊಮ್ಮೆ ಬೇಟೆಯನ್ನರಸಿ ಅತಿಕ್ರಮಿಸುವ ಬೇಟೆ ಪಕ್ಷಿ ಅಥವಾ ಪ್ರಾಣಿಯು ಒಂಟಿಯಾಗಿದ್ದಲ್ಲಿ ಇತರ ಸುತ್ತಮುತ್ತಲಿನ ಹಕ್ಕಿಗಳು ಸಾಮೂಹಿಕವಾಗಿ ದಾಳಿ ಮಾಡಿ. ಆ ಅತಿಕ್ರಮಿಸಿದ ಪಕ್ಷಿ ಅಥವಾ ಪ್ರಾಣಿಯನ್ನು ಹಿಮ್ಮೆಟ್ಟಿಸುತ್ತವೆ. ಉದಾಹರಣೆಗೆ ಕಾಗೆ-ಹದ್ದುಗಳನ್ನು ಕಾಜಾಣಗಳು ಹಿಮ್ಮೆಟ್ಟಿಸುವುದು, ಗೊರವಂಕ, ಗಿಳಿಗಳಂತಹ ಪಕ್ಷಿಗಳು ಗೂಡಿನತ್ತ ಬರುವ ಹಾವುಗಳು ಸುಳಿದಾಗ ದಾಳಿ ಮಾಡಿ ಓಡಿಸಿದ್ದನ್ನು ನಮ್ಮ ಸುತ್ತಮುತ್ತ ನೋಡಿದ್ದೇವೆ. ಇಲ್ಲಿ ಹಕ್ಕಿಗಳು ಮಾಡುವ ಬೇಟೆಯ ಪರಿಯನ್ನು ನಾವು ತಿಳಿಯಬಹುದು.





# ಐಸೋಟೋಪು

ಕೆಂಪು ಆಕಾಶದ ಸಂಜೆಯಲಿ
ಮರ್ಕ್ಯೂರಿ ದೀಪದ ಕೆಳಗೆ
ಬಯ್ಕಳೆದು ಕುಕ್ಕುರುಗಾಲಲ್ಲಿ ಕುಳಿತ ಮುದುಕ
ಮಾಲ್ ನಲ್ಲಿ ಮಸ್ತಾಗಿ ತಿಂದು
ಕಟ್ಟುಮಸ್ತಾಗಿ ಹೊಟ್ಟೆಬೆಳೆಸಿದ ಯುವಕ

ಇವನ ಬದುಕಿಗೇಕೋ ಕಾಲ ಕುದುರುತ್ತಿಲ್ಲ
ಮುದಿಗಳ್ಯಾಕೋ ಜಾಹಿರಾತು ಗೊಳ್ಳುತ್ತಿಲ್ಲ.
ಯೌವನಕ್ಕೆ ಮಾತ್ರವೀ ಕಾಲ ಮಣೆ.

ಚಿಣಿ ಮಿಣಿ ಮಿಂಚಿನಲಿ
ಬೆರಳು ತೋರುವ ಹುಡುಗನ ಕಾರುಬಾರು
ಶಕ್ತಿಗೆ ಸೌಂದರ್ಯಕ್ಕೆ, ಯೌವನಕ್ಕೆ ಬೆಲೆ
ಕಾಲಕ್ಕೆ ಗೊತ್ತಿಹುದೇ ಕತ್ತು ತಿರುಚುವ ಕಲೆ?!.

ಕೂಲಾಗಿ ಫೂಲಾಗುವ ದಿನಗಳು
ಕಣ್ರೆಪ್ಪೆ ಮಿಟುಕಿದಂತೆಲ್ಲಾ
ಸೊನ್ನೆ ಒಂದರ ಲಿಂಗಾನುಬಂಧ
ಝೀಡಿಪಿಯ ನಕ್ಷೆ ಮೇಲಿರಿದಂತೆಲ್ಲಾ
ಅಯ್ಯೋ!
ಕೊರಳ ಕುಣಿಕೆಯ ಹಗ್ಗ ಟೈಟಾಗುತ್ತಿದೆ.

ಭೋ ಎಂದು ಮರಗಳು ಭೋಳಾಗುವಾಗ
ಪ್ಲೈ-ಹೋವರುಗಳ ಮೇಲೆ ನಮ್ಮ ಸ್ಕೈ ವಾಕು.
ನೂರಾರು ಬಣ್ಣಗಳು ತಲೆಯಿಂದ ಸಿಡಿದು
ಹಾಟಾದ ಫಿಜಾಗಳು ಹೊಟ್ಟೆಗಿಳಿಯುವ ಮುನ್ನ
ರಂಗುರಂಗಾಗಿ ರಿಂಗಣಿಸಿದೆ ಸಾವಿನ ಮಿಸ್ಕಾಲು.

- ಶಂಕರಪ್ಪ. ಕೆ.ಪಿ